ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಯೋಗಿಕ ಪತ್ರಿಕೆ

ವಿನೌಕೆಯು weekly

ಸಂಪುಟ : 01 ಸಂಚಿಕೆ : 04 ದಿನಾಂಕ : ಅಕ್ಟೋಬರ್ 01 – 07, 2016.

# ಶಿಕ್ಷಣದ ಉನ್ನತೀಕರಣಕ್ಕೆ ನೂರು ನೂತನ ಕಾಲೇಜು: ಪ್ರೊ. ಸುಭಾಷ್

**ಬಳ್ಳಾರಿ, ಅ. 1:** ಉನ್ನತ ಶಿಕ್ಷಣಕ್ಕೆ ಪ್ರವೇಶಾತಿ ಪಡೆಯುವ ಪ್ರಮಾಣವು ಬಳ್ಳಾರಿ (9.57%) ಮತ್ತು ಕೊಪ್ಪಳ (6.7%) ಭಾಗದಲ್ಲಿ ಶೇಕಡಾ ಹತ್ತಕ್ಕಿಂತ ಕಡಿಮೆಯಿದ್ದು, ಈ ಸಂಖ್ಯೆಯನ್ನು ಶೇ.25ಕ್ಕೆ ಏರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಟಾರ್ಗೆಟ್–100 ಕಾರ್ಯಾಗಾರವನ್ನು ಹಮ್ಮಿಕೊಂಡಿದೆ ಎಂದು ಕುಲಪತಿ ಪ್ರೊ. ಎಂ.ಎಸ್.ಸುಭಾಷ್ ತಿಳಿಸಿದರು.

ವಿಶ್ವವಿದ್ಯಾಲಯದ ಹೊಸ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಟಾರ್ಗೆಟ್–100 ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡಿದರು. ಪ್ರಸ್ತುತ ಬಳ್ಳಾರಿಯಲ್ಲಿ 64 ಮತ್ತು ಕೊಪ್ಪಳದಲ್ಲಿ 40 ಪದವಿ ಕಾಲೇಜುಗಳಿವೆ. ಮುಂದಿನ ಒಂದೆರಡು ವರ್ಷಗಳಲ್ಲಿ ಹೊಸದಾಗಿ 100 ಕಾಲೇಜುಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದೇವೆ. ಈ ಮೂಲಕ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಉನ್ನತ ಶಿಕ್ಷಣ ಸರಾಸರಿಯನ್ನು ಶೇ. 25 ಕ್ಕೇರಿಸುವ ಗುರಿ ಇರಿಸಿಕೊಳ್ಳಲಾಗಿದೆ, ಇದುವೇ ಟಾರ್ಗೆಟ್–100 ಎಂದು ತಮ್ಮ ಕನಸನ್ನು ಬಿಚ್ಚಿಟ್ಟರು.

ವಿವಿಯ ಅಭಿವೃದ್ಧಿ ಕಾರ್ಯಗಳ ಭಾಗವಾಗಿ ಹಾಸ್ಟೆಲ್ ಸೌಲಭ್ಯಗಳು, ತೆಲಂಗಾಣ ಮಾದರಿಯಲ್ಲಿ ವಸತಿಸಹಿತ ವಿದ್ಯಾರ್ಥಿನಿಯರ ಪದವಿ ಕಾಲೇಜು, ಮನರೇಗಾದಡಿ ವಿಶೇಷ ವಿದ್ಯಾರ್ಥಿ ವೇತನ, ನಾಲ್ಕು ಪ್ಲೇಸ್‌ಮೆಂಟ್ ಸೆಲ್‌ಗಳ ಸ್ಥಾಪನೆ, ವಿವಿಧ ಕೌಶಲ್ಯ ತರಬೇತಿ, ವೀಡಿಯೋ ಕಾನ್ಫರೆನ್ಸ್ ಮೂಲಕ ಶಿಕ್ಷಣ ಮತ್ತು ನಂದಿಹಳ್ಳಿಯಲ್ಲಿ ಐಐಟಿ ಉಪಕೇಂದ್ರ ಸ್ಥಾಪಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದ್ದು, ಪ್ರಸ್ತಾವನೆಯೂ ತಯಾರಾಗಿದೆ ಎಂದು ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆಗಿರುವ ಕುಲಪತಿಗಳು ತಿಳಿಸಿದರು.



**ವಿವಿಯಲ್ಲಿನ ಹೊಸ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಟಾರ್ಗೆಟ್–100 ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿರುವ ಬಳ್ಳಾರಿ ಸಂಸದ ಶ್ರೀರಾಮುಲು.**

ಮುಖ್ಯ ಅತಿಥಿ ಸಂಸದ ಶ್ರೀರಾಮುಲು ಮಾತನಾಡಿ ಈ ಭಾಗದ ಜನರು ಶೇ. 100 ರಷ್ಟು ಶಿಕ್ಷಣ ಪಡೆದುಕೊಳ್ಳುವುದರ ಮೂಲಕ ಉನ್ನತ ಶಿಕ್ಷಣದಲ್ಲಿ ಕ್ರಾಂತಿಯನ್ನುಂಟುಮಾಡಬೇಕು. ವಿವಿಯು 100 ಕಾಲೇಜುಗಳ ಸ್ಥಾಪನೆಗೆ ಕ್ರಮ ಕೈಗೊಂಡಿರುವುದು ಉತ್ತಮ ಕಾರ್ಯವಾಗಿದ್ದು, ಅದಕ್ಕೆ ಬೇಕಾದ ಎಲ್ಲಾ ಸಹಾಯವನ್ನು ಮಾಡುವುದಾಗಿ ಭರವಸೆ ನೀಡಿದರು. ವೃತ್ತಿಪರ ಕೋರ್ಸ್‌ಗಳನ್ನು ಜಾರಿಗೆ ತಂದು ಕ್ಯಾಂಪಸ್ ಇಂಟರ್‌ವ್ಯೂವ್‌ಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುವ ಕೆಲಸವಾಗಬೇಕು ಎಂದು ಅವರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಅಲ್ಲಂ ವೀರಭದ್ರಪ್ಪ ಮಾತನಾಡಿ ಕಾಲೇಜುಗಳು ವಿದ್ಯೆ ಮತ್ತು ಉದ್ಯೋಗ ಆಧಾರಿತವಾಗಿರಬೇಕು. ಬಳ್ಳಾರಿ ಜಿಲ್ಲೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿರುವುದರಿಂದ ಮೈನಿಂಗ್, ಯಂತ್ರೋಪಕರಣಗಳ ಚಾಲನೆ ಸೇರಿದಂತೆ ವಿವಿಧ ವಿಷಯಗಳ ಡಿಪ್ಲೋಮಾ ಕೋರ್ಸುಗಳನ್ನು ಕಲಿಸುವಂತಹ ಸಂಸ್ಥೆಗಳನ್ನು ಪ್ರಾರಂಭಿಸಬೇಕು. ಈ ಮೂಲಕ ಸ್ಥಳೀಯರಿಗೆ ಉದ್ಯೋಗಾವಕಾಶ ಒದಗಿಸಲು ಸಾಧ್ಯ ಎಂದು ಅಭಿಪ್ರಾಯಿಸಿದರು. ಈ ಸಂದರ್ಭದಲ್ಲಿ ವಿವಿಯ ಕುಲಸಚಿವ ಪ್ರೊ. ಟಿ. ಎನ್. ಭಾಸ್ಕರ್, ಪರೀಕ್ಷಾಂಗ ಕುಲಸಚಿವ ಪ್ರೊ. ಎಲ್.ಆರ್. ನಾಯಕ್, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ. ಸುರೇಶ್‌ಬಾಬು ಹಾಗೂ ವಿವಿಧ ಸಂಘಸಂಸ್ಥೆಗಳ ಸದಸ್ಯರು ಹಾಜರಿದ್ದರು.

**ಮಾಹಿತಿ ಹಂಚಿಕೆ:** ಕಾರ್ಯಕ್ರಮದ ಭಾಗವಾಗಿ ಆಸಕ್ತ ಸಂಘಸಂಸ್ಥೆಗಳಿಗೆ, ಕಾಲೇಜುಗಳನ್ನು ತೆರೆಯಲು ಅಗತ್ಯವಿರುವ ನೊಂದಾವಣಿ ಪ್ರಕ್ರಿಯೆಗಳು ಹಾಗೂ ಸಂಸ್ಥೆ ಬೆಳೆಸುವ ವಿಧಾನಗಳ ಬಗ್ಗೆ ನಿವೃತ್ತ ಪ್ರಾಧ್ಯಾಪಕ ಚಚಡಿ ಮತ್ತು ಪ್ರೊ. ರುದ್ರಪ್ಪ ಉಪನ್ಯಾಸ ನೀಡಿದರು. ಕಾಲೇಜುಗಳನ್ನು ತೆರೆಯುವುದರಿಂದಾಗುವ ಪ್ರಯೋಜನಗಳ ಕುರಿತು ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಪ್ರಾಧ್ಯಾಪಕ ಡಾ. ಎಂ. ಎಸ್. ತಳವಾರ್ ಮಾಹಿತಿ ನೀಡಿದರು.

**–ಪದ್ಮಾವತಿ, ಲತಾ ವಿ.**







**ಸುದ್ದಿಚಿತ್ರ:** ಗಾಂಧೀಜಯಂತಿಯ ಅಂಗವಾಗಿ ಅಕ್ಟೋಬರ್ 02ರಂದು ಏರ್ಪಡಿಸಲಾಗಿದ್ದ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಕ್ಯಾಂಪಸ್‌ನ ವಿವಿಧ ಸ್ಥಳಗಳ ಸ್ವಚ್ಛತಾಕಾರ್ಯದಲ್ಲಿ ನಿರತರಾಗಿರುವ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು.

# ಬಳ್ಳಾರೆಯು, ಬಳ್ಳಾರಿ ಆದ ಬಗೆ

ಬಳ್ಳಾರಿ ಪಟ್ಟಣವು ಬಳ್ಳಾರಿ ಜಿಲ್ಲೆಯ ಕೇಂದ್ರ ಸ್ಥಳವಾಗಿದೆ. ಇದು ಬೆಂಗಳೂರಿನ ಉತ್ತರ ದಿಕ್ಕಿಗೆ 306 ಕಿ.ಮೀ. ದೂರದಲ್ಲಿದೆ.




ಬಳ್ಳಾರಿ ಪಟ್ಟಣಕ್ಕೆ ಈ ಹೆಸರು ಬರಲು ಕಾರಣವಾಗಿದ್ದರ ಕುರಿತು ವಿವಿಧ ಐತಿಹಾಸಿಕ ಮತ್ತು ಪೌರಾಣಿಕ ಪ್ರತೀತಿಗಳಿವೆ. ಬಳ್ಳಾರಿ ಪಟ್ಟಣದ ಮೊದಲ ಹೆಸರು ಬಳ್ಳಾರೆ ಎಂಬುದಾಗಿತ್ತು ಎಂದು 12ನೇ ಶತಮಾನದ ಕೋಳೂರು, ಸಿಂಡಿಗೇರಿ, ಬೈಲೂರು ಮತ್ತು ಕುರುಗೋಡು ಶಾಸನಗಳಿಂದ ತಿಳಿದು ಬರುತ್ತದೆ. ರಾಚಮಲ್ಲ, ಬೀಮರಸ, ಅಜ್ಜರಸ ಮೊದಲಾದ ಸಿಂದ ವಂಶದ ಅರಸರಿಗೆ ಈ ಪಟ್ಟಣ ರಾಜಧಾನಿಯಾಗಿತ್ತು.

ಬಳ್ಳೇಶ ಮಲ್ಲಾರ್ಯ ಎಂಬ ಶರಣನು ಬಳ್ಳವನ್ನೇ ಶಿವಲಿಂಗವೆಂದು ಪೂಜಿಸಿದರ ಫಲವಾಗಿ ಬಳ್ಳಾ+ಅರಿ=ಬಳ್ಳಾರಿ ಎಂದಾಯಿತು. ಈ ಊರಿನ ಗ್ರಾಮದೇವತೆ ಬಲಾರಿ, ಬಳ್ಳಾರಿ ಆಯಿತೆಂದು ಸ್ಥಳೀಯ ಪ್ರತೀತಿ.

ಬಳ್ಳಾರಿ ಗುಡ್ಡದ ಮೇಲೆ ಬಳಾಸುರನೆಂಬ ರಾಕ್ಷಸನು ಆಶ್ರಯ ಮಾಡಿಕೊಂಡು ಇಲ್ಲಿ ಜನರಿಗೆ ಉಪದ್ರವ ಕೊಡುತ್ತಿದ್ದನು. ಸ್ವರ್ಗಲೋಕದಿಂದ ದೇವಕನ್ಯೆಯರು ಇಚ್ಛಾವಿಹಾರದಲ್ಲಿ ವಿಹರಿಸುತ್ತ ಈ ಪರ್ವತದ ಮೇಲೆ ಖೇಚರ ಮಾರ್ಗದಲ್ಲಿ ಹೋಗುತ್ತಿರುವಾಗ ರಾಕ್ಷಸನು ಕಾಮಾತುರನಾಗಿ ಅವರಿಗೆ ಉಪದ್ರವ ಕೊಟ್ಟಿದ್ದರಿಂದ ಅವರು ದೇವೇಂದ್ರನಲ್ಲಿ ಮೊರೆಯಿಟ್ಟರು. ಆಗ ದೇವೇಂದ್ರ ಬಳಾಸುರನನ್ನು ವಜ್ರಾಯುಧದಿಂದ ಸಂಹಾರ ಮಾಡಿದ್ದರಿಂದ ಈ ಗುಡ್ಡಕ್ಕೆ ಬಳ್ಳಾರಿ ಎಂಬ ನಾಮ ಪ್ರಸಿದ್ಧಿ ಹೊಂದಿತೆಂದು ಸಂಸ್ಕೃತ ಮೂಲ ಹೇಳುತ್ತದೆ.

ಕಲಿಯುಗದಲ್ಲಿ ಬಳ್ಳರಾಯನ ವಂಶಸ್ಥನಾದ ಸಿಂಧು ಬಲ್ಲಾಳರಾಯನು ರಾಜ್ಯ ಕಟ್ಟಿದ್ದರಿಂದ ಅವನ ಹೆಸರಿನಿಂದಲೇ ಬಳ್ಳಾರಿ ಆಯಿತೆಂದು ಬಳ್ಳಾರಿ ಕೈಫಿಯತ್ತು ಹೇಳುತ್ತದೆ.

ಮೂಲ: ಡಾ. ಎಂ. ಕೊಟ್ರೇಶ್‌ರ ಬಳ್ಳಾರಿ ಜಿಲ್ಲೆಯ ಕೋಟೆಗಳು ಕೃತಿ

## ಕೆ–ಸೆಟ್‌ಗೆ ಅರ್ಜಿ ಆಹ್ವಾನ

**ಮೈಸೂರು ಸೆ. 25:** ಮೈಸೂರು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಪರೀಕ್ಷೆಯು ಡಿಸೆಂಬರ್ 11ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೆ.26 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ಅ.25 ಕೊನೆಯ ದಿನವಾಗಿರುತ್ತದೆ, ಆದರೆ 150 ರೂ. ದಂಡ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ನ.4 ರ ವರೆಗೆ ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಸ್ವವಿವರ ಮತ್ತು ಶೈಕ್ಷಣಿಕ ಮಾಹಿತಿ ನೋಂದಣಿ ಮಾಡಿದ ನಂತರ ಕೆನರಾ ಬ್ಯಾಂಕ್ ಶಾಖೆಗಳಲ್ಲಿ ಡೆಬಿಟ್, ಕ್ರೆಡಿಟ್, ನೆಟ್‌ಬ್ಯಾಂಕಿಂಗ್ ಅಥವಾ ನೆಫ್ಟ್ ಮೂಲಕ ಶುಲ್ಕ ಪಾವತಿಸಬೇಕು. ಶುಲ್ಕ ಪಾವತಿಸಿದ ನಂತರ ಅರ್ಜಿ ಪ್ರತಿ, ಚಲನ್ ಹಾಗೂ ಹಾಜರಾತಿ ಪ್ರತಿಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಸೂಕ್ತ ದಾಖಲೆಗಳೊಂದಿಗೆ ನ. 10ರ ಒಳಗೆ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ http//:kset.uni-mysore.ac.in ಸಂಪರ್ಕಿಸಬಹುದು.

## ಉದ್ಯೋಗ ಮಾಹಿತಿ

| ಇಲಾಖೆ/ವೆಬ್‌ಸೈಟ್ | ಹುದ್ದೆಗಳ ಸಂಖ್ಯೆ |
|---|---|
| ಕೆಪಿಎಸ್‌ಸಿ | 156 |
| ಪಿಡಿಓ | 815 |
| ಗ್ರಾ.ಪಂ. ಕಾರ್ಯದರ್ಶಿ | 809 |
| ಪಿಎಸ್‌ಐ(ಸಿವಿಲ್) | 398 |
| ಆರ್‌ಎಸ್‌ಐ (ವೈರ್‌ಲೆಸ್) | 90 |
| ಸಿಪಿಸಿ (ಸಿವಿಲ್ ಕಾನ್ಸ್‌ಟೇಬಲ್) | 3477 |
| ಪೋಲಿಸ್ ಕಾನ್ಸ್‌ಟೇಬಲ್ | 1834 |
| ನವೋದಯ ಶಿಕ್ಷಕರು | 2072 |
| ಪ್ರಿನ್ಸಿಪಾಲ್(ಕೇಂದ್ರಿಯ ವಿದ್ಯಾಲಯ) | 90 |
| ಪಿಜಿಟಿ(ಕೇಂದ್ರಿಯ ವಿದ್ಯಾಲಯ) | 334 |
| ಟಿಜಿಟಿ(ಕೇಂದ್ರಿಯ ವಿದ್ಯಾಲಯ) | 486 |
| ಪ್ರಾಥಮಿಕ ಶಿಕ್ಷಕರು(ಕೇಂದ್ರಿಯ ವಿದ್ಯಾಲಯ) | 2281 |
| ಇಂಡಿಯನ್ ರೇಲ್ವೇ | 30 |
| ಎಸ್‌ಬಿಐ | 229 |
| ಪಿಎಸ್‌ಸಿ(ವ್ಯಾಪಾರ ತೆರಿಗೆ ತನಿಖಾಧಿಕಾರಿ) | 62 |
| ಎಸ್‌ಎಸ್‌ಸಿ | 326 |

**ವಿದ್ಯಾರ್ಥಿ ಸಂಪಾದಕರು:** ಪದ್ಮಾವತಿ, ಲತಾ ವಿ, ರಾಘವೇಂದ್ರ, ಗುರುಬಸವರಾಜ್ ಉಳ್ಳಾಗಡ್ಡಿ, ಪಿ. ಅಲ್ಲಾಭಕ್ಷಿ, ವಿಶ್ವರೂಪ್. **ಮಾರ್ಗದರ್ಶಕರು :** ವಿನಯ್ ಜಿ. ಪಿ.